**O.S.No.261/2025**
**P.W-1**

**<u>ಸಾಕ್ಷಿ ಯನ್ನು ದಿಃ 03.06.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಎಲ್ ವಿ ವಕೀಲರಿಂದ:</u>**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

**<u>ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಃ</u>**

1. ನಾನು ತಹಶೀಲ್ದಾರ್ ರವರಿಗೆ ಬರೆದ ಪತ್ರದ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.1** ಎಂದು ಗುರುತಿಸಲಾಗಿದೆ.
2. ಹಕ್ಕು ದಾಖಲೆ ತಹಶೀಲ್ದಾರ್ ರವರು ನೀಡಿದ ಜ್ಞಾಪನವನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.2** ಎಂದು ಗುರುತಿಸಲಾಗಿದೆ.
3. ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರು ಹಾಗೂ ತಾಲ್ಲೂಕು ಸರ್ವೇಯರ್ ರವರುಗಳು ನೀಡಿದ ವರದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ.3 ರಿಂದ 5 ಎಂದು ಗುರುತಿಸಲಾಗಿದೆ.
4. ಸರ್ವೆ ನಂ.176/4 ರ ಸರ್ವೆ ಸ್ಕೆಚ್ ಅನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.6**ಎಂದು ಗುರುತಿಸಲಾಗಿದೆ.

5. ದಿನಾಂಕ 15.06.1969 ರ ನೊಂದಾಯಿತ ಕ್ರಯ ಪತ್ರದ ಮೂಲ ಕ್ರಯಪತ್ರವನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.7** ಎಂದು ಗುರುತಿಸಲಾಗಿದೆ.

6. ಎಂ ಆರ್ 209 ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.8 ಎಂದು ಗುರುತಿಸಲಾಗಿದೆ.

7. ಸರ್ವೆ ನಂ.176/4 ರ 4 ಪುಟಗಳ ಕೈಬರಹದ ಪಹಣಿಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ.9 ರಿಂದ ನಿಪಿ.12 ಎಂದು ಗುರುತಿಸಲಾಗಿದೆ.

8. ಸರ್ವೆ ನಂ.176/4 ರ 2024-25 ರ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.13 ಎಂದು ಗುರುತಿಸಲಾಗಿದೆ.

9. ಸರ್ವೆ ನಂ.176/6 ರ 2024-25 ರ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.14 ಎಂದು ಗುರುತಿಸಲಾಗಿದೆ.

10. ಸರ್ವೆ ನಂ.176 ರ ಮೂಲ ಟಿಪ್ಪಣಿಯ ಎರಡು ಪುಟಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.15 ಎಂದು ಗುರುತಿಸಲಾಗಿದೆ.

11. ಸರ್ವೆ ನಂ.176 ರ ಪಕ್ಕಾ ಪುಸ್ತಕದ ಎರಡು ಪುಟಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.16 ಎಂದು ಗುರುತಿಸಲಾಗಿದೆ.

12. ಸರ್ವೆ ನಂ.176 ರ ಎರಡು ಪುಟಗಳ ಆಕಾರ್ ಬಂದ್ ನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.17 ಎಂದು ಗುರುತಿಸಲಾಗಿದೆ.

13. ಎಂ ಆರ್ 3/85-86 ರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ.18 ಎಂದು ಗುರುತಿಸಲಾಗಿದೆ.

14. ಪ್ರತಿವಾದಿಗಳಿಗೆ ಕಳುಹಿಸಿದ ನೋಟೀಸಿನ ಪ್ರತಿಯನ್ನು **ನಿ.ಪಿ.19 ಎಂದು ಗುರುತಿಸಲಾಯಿತು.**

15. ಮೂರು ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿ.ಪಿ.20 ರಿಂದ ನಿಪಿ.22** ಎಂದು ಗುರುತಿಸಲಾಯಿತು.

16. ಎರಡು ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು **ನಿಪಿ.23 ಮತ್ತು ನಿಪಿ.24** ಎಂದು ಗುರುತಿಸಲಾಯಿತು.

17. ಜಾರಿಯಾಗದೇ ಬಂದ ಒಂದು ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.25** ಎಂದು ಗುರುತಿಸಲಾಯಿತು. ಸದರಿ ಲಕೋಟೆಯಲ್ಲಿನ ನೋಟಿಸ್ ನ್ನು **ನಿಪಿ.25(ಎ)** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.